# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1376
ಮಾನ್ಯ ಸದಸ್ಯರ ಹೆಸರು : ಶ್ರೀ ರಾಮೋಜಿಗೌಡ
ಉತ್ತರಿಸುವ ದಿನಾಂಕ : 22-08-2025
ಉತ್ತರಿಸುವ ಸಚಿವರು : ಮಾನ್ಯ ಸಮಾಜ ಕಲ್ಯಾಣ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸಲಾಗುತ್ತಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ರಾಜ್ಯದಾದ್ಯಂತ 68 ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದೆ. ಜಿಲ್ಲಾವಾರು ವಿವರವನ್ನು ಅನುಬಂಧ – 1ರಲ್ಲಿ ಒದಗಿಸಲಾಗಿದೆ. |
| ಆ) | ಸದರಿ ವಸತಿ ಶಾಲೆಗಳಲ್ಲಿರುವ ಮೂಲಭೂತ ಸೌಲಭ್ಯಗಳ ಕೊರತೆಗಳಾವುವು: (ವಿವರಗಳನ್ನು ನೀಡುವುದು) | ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ದಾಖಲಾಗುವ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಂಬಂಧ ರಾಜ್ಯವಲಯದಿಂದ ನಿಲಯಗಳಿಗೆ ಅಗತ್ಯವಿರುವ ಸಾಮಗ್ರಿಗಳಾದ ಟೂ ಟಯರ್ ಕಾಟ್, ಸೋಲಾರ್ ವಾಟರ್ ಹೀಟರ್, ಡೈನಿಂಗ್ ಟೇಬಲ್, ಡೀಸೆಲ್ ಜನರೇಟರ್, ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ, ಸಿಸಿಟಿವಿ ಕ್ಯಾಮರಾಗಳನ್ನು ಕೆಟಿಪಿಪಿ ನಿಯಮಾವಳಿಗಳನ್ವಯ ಇ-ಟೆಂಡರ್ ಮೂಲಕ ಖರೀದಿಸಿ ಪೂರೈಸಲಾಗುತ್ತಿದೆ.<br><br>ವಿದ್ಯಾರ್ಥಿನಿಲಯಗಳಲ್ಲಿ ಅಗತ್ಯವಿರುವ ಇತರೆ ಮೂಲಭೂತ ಸಾಮಗ್ರಿಗಳಾದ ಯುಪಿಎಸ್, ವಾಟರ್ ಪ್ಯೂರಿಫೈರ್, ಲೈಬ್ರರಿ ಬುಕ್ಸ್, ಕ್ರೀಡಾ ಸಾಮಗ್ರಿಗಳು, ಇನ್ಸಿನೇಟರ್, ಬೆಂಕಿ ನಂದಿಸುವ ಉಪಕರಣ, ಪಾತ್ರೆ ಪರಿಕರಗಳು ಹಾಗೂ ಇತರೆ ತುರ್ತು ಸಾಮಗ್ರಿಗಳ ಖರೀದಿಗಾಗಿ ಜಿಲ್ಲಾ ಮಟ್ಟಗಳಲ್ಲಿ ಅನುಷ್ಠಾನಗೊಳಿಸಲು ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.<br><br>2025-26ನೇ ಸಾಲಿಗೆ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಒಟ್ಟು ರೂ.30.00 ಕೋಟಿ ಬಿಡುಗಡೆ ಮಾಡಿ ಆದೇಶಿಸಿದೆ. ಅದರಂತೆ ರಾಜ್ಯವಲಯದಿಂದ ವಿದ್ಯಾರ್ಥಿನಿಲಯಗಳಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಇ-ಟೆಂಡರ್ ಮೂಲಕ ಖರೀದಿಸಲು ಕ್ರಮವಹಿಸಲಾಗುತ್ತಿದೆ. |
| ಇ) | ಕೊರತೆ ಇರುವ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು: (ವಿವರಗಳನ್ನು ನೀಡುವುದು) | |

| | | |
|---|---|---|
| ಈ) | ಸದರಿ ವಸತಿ ಶಾಲೆಗಳಲ್ಲಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರರ ಸಂಖ್ಯೆ ಎಷ್ಟು: | ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಒಟ್ಟು 68 ವಸತಿ ಶಾಲೆಗಳನ್ನು ನಿರ್ವಹಣೆ ಮಾಡಲಾಗುತ್ತಿದ್ದು, ಸದರಿ ವಸತಿ ಶಾಲೆಗಳಲ್ಲಿ 157 ಬೋಧಕರು ಗೌರವಧನದ ಆಧಾರದ ಮೇಲೆ ಹಾಗೂ ಅಡುಗೆಯವರು-81, ಅಡುಗೆ ಸಹಾಯಕರು-66, ಕಾವಲುಗಾರರು-51 ಸಿಬ್ಬಂದಿಗಳು ಹೊರಸಂಪನ್ಮೂಲ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. |
| ಉ) | ಸದರಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರರಿಗೆ ನೀಡುತ್ತಿರುವ ವೇತನ ಎಷ್ಟು? | ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿನ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಸಂಪನ್ಮೂಲ ಬೋಧಕ ಸಿಬ್ಬಂದಿಗಳಿಗೆ ರೂ.12,500/- ಗಳ ವೇತನವನ್ನು ಪಾವತಿಸಲಾಗುತ್ತಿದೆ.<br><br>ಗ್ರೂಪ್-ಡಿ ಹುದ್ದೆಗಳಿಗೆ ಸಂಬಂಧಿಸಿದಂತೆ ಕಾರ್ಮಿಕ ಇಲಾಖೆಯಿಂದ ಪ್ರತಿ ವರ್ಷ ವಲಯವಾರು [Zone wise] ನಿಗಧಿಪಡಿಸಿರುವ ದರದಂತೆ ವೇತನವನ್ನು ಪಾವತಿಸಲಾಗುತ್ತಿದ್ದು ವಿವರ ಈ ಕೆಳಕಂಡಂತಿದೆ. |

| ಕ್ರ. ಸಂ | ಹುದ್ದೆಗಳ ವಿವಿರ | ZONE-2 basic+VDA | ZONE-3 basic+VDA | ZONE-4 basic+VDA |
|---|---|---|---|---|
| 1. | ಅಡುಗೆಯವರು | 17,766 | 16,353 | 15,069 |
| 2. | ಅಡುಗೆ ಸಹಾಯಕರು | 14,366 | 13,060 | 11,873 |
| 3. | ಕಾವಲುಗಾರರು | 16,589 | 15,283 | 14,096 |

**ಸಕಇ 720 ಪಕವಿ 2025**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

**ಮಾನ್ಯ ವಿಧಾನ ಪರಿಷತ್ ಸದಸ್ಯರಾದಶ್ರೀ ರಾಮೋಜಿಗೌಡ(ಪದವೀಧರರ ಕ್ಷೇತ್ರ) ರವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1228(1376)ಕ್ಕೆ ಅನುಬಂಧ- 1**

| ಕ್ರಸಂ | ಜಿಲ್ಲೆ ಹೆಸರು | ವಸತಿ ಶಾಲೆಗಳ ಸಂಖ್ಯೆ |
|---|---|---|
| 1 | ಬೆಂಗಳೂರು | 2 |
| 2 | ಶಿವಮೊಗ್ಗ | 2 |
| 3 | ಕೋಲಾರ | 1 |
| 4 | ತುಮಕೂರು | 2 |
| 5 | ಚಿಕ್ಕಬಳ್ಳಾಪುರ | 1 |
| 6 | ಮೈಸೂರು | 2 |
| 7 | ಚಿಕ್ಕಮಗಳೂರು | 2 |
| 8 | ದಕ್ಷಿಣ ಕನ್ನಡ | 1 |
| 9 | ಹಾಸನ | 5 |
| 10 | ಕೊಡಗು | 1 |
| 11 | ಬೆಳಗಾವಿ | 3 |
| 12 | ವಿಜಯಪುರ | 1 |
| 13 | ಬಾಗಲಕೋಟೆ | 3 |
| 14 | ಧಾರವಾಡ | 1 |
| 15 | ಗದಗ | 2 |
| 16 | ಹಾವೇರಿ | 7 |
| 17 | ಉತ್ತರ ಕನ್ನಡ | 3 |
| 18 | ಕಲಬುರಗಿ | 11 |
| 19 | ಯಾದಗಿರಿ | 2 |
| 20 | ರಾಯಚೂರು | 7 |
| 21 | ಕೊಪ್ಪಳ | 1 |
| 22 | ಬಳ್ಳಾರಿ | 1 |
| 23 | ವಿಜಯನಗರ | 1 |
| 24 | ಬೀದರ್ | 6 |
| | ಒಟ್ಟು : | **68** |

**ಆಯುಕ್ತರ ಪರವಾಗಿ,**
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು